ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

**ವಿಷಯ:-** ಕ.ವಿ.ಪ್ರ.ನಿ.ನಿಯ ಟರ್ನ್‌ಕೀ ಕಾಮಗಾರಿಯ ಟೆಂಡರ್ ದಾಖಲೆಗಳಲ್ಲಿ ಗುತ್ತಿಗೆ ಕಾರ್ಯಕ್ಷಮತೆ ಬ್ಯಾಂಕ್ ಖಾತರಿ (Contract Performance Bank Guarantee) ಯನ್ನು ಶೇಕಡಾ 5 ಕ್ಕೆ ನಿಗಧಿಗೊಳಿಸುವ ಕುರಿತು.

**ಉಲ್ಲೇಖ:-**
1. ಸರ್ಕಾರ ಆದೇಶ ಸಂಖ್ಯೆ: ಎಫ್‌ಡಿ 09 ಪಿಸಿಎಲ್ 2004(ಚ) ದಿನಾಂಕ 06.08.2005.
2. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 06 ಪಿಸಿಎಲ್ 2006 ದಿನಾಂಕ 21.03.2007.
3. ಸರ್ಕಾರ ಆದೇಶ ಸಂಖ್ಯೆ: ಎಫ್‌ಡಿ 4 ಪಿಸಿಎಲ್ 2008 ದಿನಾಂಕ 14.10.2008.
4. ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ, ಕರ್ನಾಟಕ ಸರ್ಕಾರ ರವರ ಪತ್ರ ಸಂಖ್ಯೆ: ಎನರ್ಜಿ935 ವಿಎಸ್‌ಸಿ 2020 ದಿನಾಂಕ 21.11.2020.
5. ವ್ಯವಸ್ಥಾಪಕ ನಿರ್ದೇಶಕರಿಂದ ದಿನಾಂಕ: 21.11.2020 ಅನುಮೋದಿಸಿದ ಟಿಪ್ಪಣಿ ಸಂಖ್ಯೆ: ಮುಇಂ(ವಿ)/ಅಇಂ(ವಿ)/2020-21.

23/11/2020

**ಪೀಠಿಕೆ:**

ಕವಿಪ್ರನಿನಿಯ ಟರ್ನ್‌ಕೀ ಟೆಂಡ'ರ್ ದಾಖಲೆಗಳ ಅನ್ವಯ ಗುತ್ತಿಗೆದಾರರು ಕಾರ್ಯಾದೇಶದಲ್ಲಿನ ಗುತ್ತಿಗೆ ಮೊತ್ತದ ಮೇಲೆ ಶೇಕಡಾ 10 ರಷ್ಟು ಗುತ್ತಿಗೆ ಕಾರ್ಯಕ್ಷಮತೆ ಬ್ಯಾಂಕ್ ಖಾತರಿ (Contract Performance Bank Guarantee) ಯನ್ನು ನೀಡಬೇಕಿರುತ್ತದೆ. ಕೆಲವು ಬಿಡ್ಡುದಾರರು ಕೋವಿಡ್-19 ಮಹಾಮಾರಿಯ ಹಿನ್ನೆಲೆಯಲ್ಲಿ ಹಾಗೂ ನಂತರ ಉದ್ಭವಿಸಿರುವ ಕಾರಣಗಳಿಂದ ಕಷ್ಟಕರವಾದ ಸಮಯವನ್ನು ಎದುರಿಸುತ್ತಿದ್ದು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿ, ಟರ್ನ್‌ಕೀ ಆಧಾರದ ಮೇಲೆ ಉಪಕೇಂದ್ರ ಹಾಗೂ ಪ್ರಸರಣ ಮಾರ್ಗಗಳನ್ನು ನಿರ್ಮಿಸಲು ಆಹ್ವಾನಿಸುತ್ತಿರುವ ಕಾಮಗಾರಿಯ ಟೆಂಡರ್ ದಾಖಲೆಗಳಲ್ಲಿ ಗುತ್ತಿಗೆ ಕಾರ್ಯಕ್ಷಮತೆ ಬ್ಯಾಂಕ್ ಖಾತರಿ (Contract Performance Bank Guarantee) ಯನ್ನು ಚಾಲ್ತಿಯಲ್ಲಿರುವ ಶೇಕಡಾ 10 ರಿಂದ ಶೇಕಡಾ 5 ಕ್ಕೆ ಕಡಿಮೆಗೊಳಿಸಿ ನಿಗದಿಪಡಿಸುವ ಸಡಿಲಿಕೆಯನ್ನು ಕೋರಿರುತ್ತಾರೆ. ಕರ್ನಾಟಕ ಸರ್ಕಾರದ ಅಧಿಸೂಚನೆ ದಿನಾಂಕ 14.10.2008 ರಲ್ಲಿ ಕೆಡಬ್ಲ್ಯೂ (KW)-4 [ರೂ. 100.00 ಲಕ್ಷಗಳಿಗೂ ಅಧಿಕ (More than Rs.100.00 Lakhs)] ಮಾದರಿ ಟೆಂಡರ್ ದಾಖಲೆಗಳ ಅನುಸಾರ, ನಿಗದಿಪಡಿಸಿರುವ ಭದ್ರತಾ ಠೇವಣಿ ಶೇಕಡಾ 5 ರಷ್ಟಿರುತ್ತದೆ.

ಈ ಸಂಬಂಧ, ಭದ್ರತಾ ಠೇವಣಿಯನ್ನು ಶೇಕಡ 10 ರಿಂದ ಶೇಕಡ 5 ಕ್ಕೆ ಕಡಿಮೆಗೊಳಿಸುವ ಪ್ರಸ್ತಾವನೆಯನ್ನು ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ, ಕರ್ನಾಟಕ ಸರ್ಕಾರ ರವರಿಗೆ ಸಲ್ಲಿಸಿದ್ದು, ಸದರಿಯವರು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯ ಸಹಮತಕ್ಕಾಗಿ ಸಲ್ಲಿಸಿದ್ದು, ಉಲ್ಲೇಖ (4) ರ ಪತ್ರದಲ್ಲಿ ಆರ್ಥಿಕ ಇಲಾಖೆಯು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 4 ಪಿಸಿಎಲ್ 2008 ದಿನಾಂಕ 14.10.2008 ರಂತೆ, ಗುತ್ತಿಗೆದಾರರಿಂದ ಪಡೆಯಬೇಕಾದ ಭದ್ರತಾ ಠೇವಣಿ ಮೊತ್ತವನ್ನು ಗುತ್ತಿಗೆ ಕರಾರು ಮೌಲ್ಯದ ಶೇಕಡಾ 5ಕ್ಕೆ ನಿಗದಿಪಡಿಸಲು ಅನುಮೋದಿಸಲಾಗಿದೆಯೆಂದು ತಿಳಿಸಲಾಗಿದೆ. ಅಲ್ಲದೆ, ಅಂಗೀಕಾರ ಪತ್ರಗಳನ್ನು ನೀಡಲು ಬಾಕಿ ಇರುವ ಕಾಮಗಾರಿಗಳಿಗೂ ಸಹ ಸದರಿ ಅವಕಾಶವನ್ನು ಅಳವಡಿಸಿಕೊಳ್ಳಲು ತಿಳಿಸಲಾಗಿದೆ.

ಈ ಹಿನ್ನಲೆಯಲ್ಲಿ, ಕೆಳಕಂಡಂತೆ ಆದೇಶಿಸಲಾಗಿದೆ:

**ಕವಿಪ್ರನಿನಿ ಆದೇಶ ಸಂಖ್ಯೆ ಕವಿಪ್ರನಿನಿ/ಬಿ19/345/85-86** **ದಿನಾಂಕ: 21.11.2020**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ, ಕರ್ನಾಟಕ ಸರ್ಕಾರರವರ ಅನುಮೋದನೆಯನ್ವಯ ಮುಂಬರುವ ಕವಿಪ್ರನಿನಿಯ ಟರ್ನ್‌ಕೀ ಕಾಮಗಾರಿಗಳ ಟೆಂಡರ್ ದಾಖಲೆಗಳಲ್ಲಿ ಗುತ್ತಿಗೆ ಕಾರ್ಯಕ್ಷಮತೆ ಬ್ಯಾಂಕ್ ಖಾತರಿಯನ್ನು (Contract Performance Bank Guarantee) ಶೇಕಡಾ 5 ರಂತೆ ಅಳವಡಿಸಿಕೊಳ್ಳಲು ಅನುಮೋದಿಸಿದೆ. ಅಲ್ಲದೆ, ಅಂಗೀಕಾರ ಪತ್ರ (Letter of Award/Letter of Intent) ನೀಡಲು ಬಾಕಿ ಇರುವ ಕಾಮಗಾರಿಗಳಿಗೂ ಸಹ ಗುತ್ತಿಗೆ ಕಾರ್ಯಕ್ಷಮತೆ ಬ್ಯಾಂಕ್ ಖಾತರಿಯನ್ನು ಟೆಂಡರ್ ದಾಖಲೆಗಳಲ್ಲಿ ನಿಗದಿಪಡಿಸಿರುವ ಶೇಕಡಾ 10 ರ ಬದಲಾಗಿ ಶೇಕಡಾ 5 ಕ್ಕೆ ನಿಗದಿಪಡಿಸಿ ಕಾಮಗಾರಿಗಳಿಗೆ ಕಾರ್ಯಾದೇಶಗಳನ್ನು ನೀಡಲು ಆದೇಶಿಸಲಾಗಿದೆ.

**ಆದೇಶದ ಮೇರೆಗೆ**

21/11/2020

**ಉಪ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)**
**ಕವಿಪ್ರನಿನಿ, ಬೆಂಗಳೂರು.**

**ಪ್ರತಿಗಳು:-**

1. ಎಲ್ಲಾ ಮುಖ್ಯ ಇಂಜನಿಯರುಗಳು (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಎಲ್ಲಾ ಅಧೀಕ್ಷಕ ಇಂಜನಿಯರ್ (ವಿ)/ (ಸಿವಿಲ್), ಕವಿಪ್ರನಿನಿ.
5. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
6. ಅಧೀಕ್ಷಕ ಇಂಜನಿಯರ್ (ವಿ), (ಐಟಿ ಮತ್ತು ಎಂಐಎಸ್) – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
7. ಎಲ್ಲಾ ಕಾರ್ಯನಿರ್ವಾಹಕ ಇಂಜನಿಯರುಗಳು (ವಿ)/ (ಸಿವಿಲ್), ಕವಿಪ್ರನಿನಿ.
8. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
9. ಲೆಕ್ಕಾಧಿಕಾರಿ (ಕೋಡೀಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು; ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.